ಸಿ. ಸಿ. ನಂ. **1339/2021**

ಪಿ ಡಬ್ಲ್ಯೂ: **1**

**ಸಾಕ್ಷಿಯು ದಿನಾಂಕಃ 21-11-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ.ಪಿ., ವಕೀಲರಿಂದ**

ಚೆಕ್ ನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ. ಆರೋಪಿ ನನಗೆ ಚೆಕ್ ಕೊಟ್ಟಾಗ ಹೊನ್ನೂರಪ್ಪ, ಲೋಕನಾಥ ಮತ್ತು ಆರೋಪಿಯ ತಂದೆ ಹಾಜರು ಇದ್ದರು. ಸದರಿಯವರ ಸಾಕ್ಷ್ಯ ಮಾಡಿಸಲು ನನಗೆ ತೊಂದರೆ ಇಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು, ಅವರಿಬ್ಬರೂ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು ಇರಲಿಲ್ಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಾಮಿಸರಿ ನೋಟ್ ನ್ನು ಆರೋಪಿಯೇ ಬರೆದುಕೊಟ್ಟಿರುತ್ತಾನೆ. ಆರೋಪಿ ಪ್ರಾಮಿಸರಿ ನೋಟ್ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಚೆಕ್ ನಲ್ಲಿರುವ ಮತ್ತು ಪ್ರಾಮಿಸರಿ ನೋಟ್ ನಲ್ಲಿರುವ ಬರವಣಿಗೆ ಬೇರೆ ಬೇರೆ ಇರುತ್ತದೆ ಅಂದರೆ ಇರಬಹುದು. ಸಾಕ್ಷಿ ಮುಂದುವರೆದು, ಆರೋಪಿಯೇ ಬರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಪ್ರಾಮಿಸರಿ ನೋಟ್ ನ್ನು ಯಾರು ಬರೆದಿರುತ್ತಾರೆ ಎಂದು ಬಿ ಕಲಂದಾರರ ಹೆಸರು ನಮೂದು ಮಾಡಿಲ್ಲ ಅಂದರೆ ಸರಿ. ನಿವೇಶನದ ವ್ಯವಹಾರಕ್ಕೆ ಸಂಬಂಧಿಸಿ ಆರೋಪಿ ನನಗೆ ಭದ್ರತೆಗಾಗಿ ನೀಡಿದ್ದ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿಃ 2 ರಲ್ಲಿ ದಿನಾಂಕ ನಮೂದು ಆಗಿಲ್ಲ ಅಂದರೆ ಸರಿ. ನಿಪಿಃ 2 ನ್ನು ನಾನೇ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

ನಿವೇಶನದ ವ್ಯವಹಾರ ಹೊರತುಪಡಿಸಿ ನನಗೂ ಮತ್ತು ಆರೋಪಿಗೂ ಬೇರೆ ವ್ಯವಹಾರ ಆಗಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು, ದುಡ್ಡು ಕೇಳಿದಾಗ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಿವೇಶಕ್ಕೆ ಸಂಬಂಧಿಸಿ ವ್ಯಾಜ್ಯ ಉಂಟಾಗಿದ್ದರಿಂದ ಆರೋಪಿಯ ಹಣವನ್ನು ಹಿಂತಿರುಗಿಸಲು ಆತನ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ಸಾಲವಾಗಿ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿಗೆ ನಾನು **confirmation deed** ಮಾಡಿಕೊಡಲು ಆಗದಿದ್ದ ಕಾರಣ ಆತನ ಹಣವನ್ನು ಆತನಿಗೆ ಹಿಂತಿರುಗಿಸಿದ್ದೆ ಅಂದರೆ ಸರಿಯಲ್ಲ.

ಬೆಂಗಳೂರಿನಲ್ಲಿ ಸಿವಿಲ್ ವ್ಯಾಜ್ಯ ಕ್ಕೆ ಸಂಬಂಧಿಸಿ ಪ್ರಕರಣ ಬಾಕಿ ಇರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು, ಮೊದಲು ವಜಾ ಆಗಿತ್ತು, ಈಗ ರಿವಿಜನ್ ಅರ್ಜಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಭದ್ರತೆಗಾಗಿ ನೀಡಿದ್ದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.